228 (813) ಶ್ರೀ ಬಾಲಕೃಷ್ಣ ಹೆಚ್.ಸಿ. (ಮಾಗಡಿ)– ಕಂದಾಯ ಸಚಿವರು ದಯಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ರಾಮನಗರ ತಾಲ್ಲೂಕಿನಲ್ಲಿ ಕಳೆದ 3 ವರ್ಷಗಳಲ್ಲಿ ಜಮೀನುಗಳನ್ನು ಭೂ ಪರಿವರ್ತನೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಯಾವ ಯಾವ ಉದ್ದೇಶಕ್ಕಾಗಿ ಭೂ ಪರಿವರ್ತನೆ ಮಾಡಲಾಗಿದೆ ಮತ್ತು ಎಷ್ಟೆಷ್ಟು ಜಮೀನುಗಳನ್ನು ಭೂಪರಿವರ್ತನೆ ಮಾಡಲಾಗಿದೆ (ವರ್ಷಾವಾರು ವಿವರಗಳನ್ನು ನೀಡುವುದು)?

ಶ್ರೀ ಜಿ. ಕರುಣಾಕರ ರೆಡ್ಡಿ (ಕಂದಾಯ ಸಚಿವರು):–

ಅ) ಹೌದು

ಆ) ವಾಸದ, ವಾಣಿಜ್ಯ ಕೈಗಾರಿಕೆ ಹಾಗೂ ಶೈಕ್ಷಣಿಕ ಉದ್ದೇಶಕ್ಕಾಗಿ ಒಟ್ಟು 195.09 ಎಕರೆ ಜಮೀನನ್ನು ಭೂ ಪರಿವರ್ತನೆ ಮಾಡಲಾಗಿದೆ. ವರ್ಷಾವಾರು ವಿವರಗಳು ಈ ಕೆಳಕಂಡಂತಿದೆ.

ವರ್ಷ		ವಿಸ್ತೀರ್ಣ (ಎ/ಗು)
2007–08	...	...
2008–09	...	20.00
2009–10	...	120.20
2010–11	...	54.29
	ಒಟ್ಟು	195.09

ಸಣ್ಣ ಕೆರೆಗಳು

229 (427) ಶ್ರೀ ಬಂಡೆಪ್ಪ ಕಾಶೆಂಪೂರ್ (ಬೀದರ್ ದಕ್ಷಿಣ)– ಸಣ್ಣ ನೀರಾವರಿ, ಯೋಜನೆ ಹಾಗೂ ಸಾಂಖ್ಯಿಕ ಸಚಿವರು ದಯಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಬೀದರ್ ದಕ್ಷಿಣ ವಿಧಾನ ಸಭಾ ಕ್ಷೇತ್ರದಲ್ಲಿರುವ ಸಣ್ಣ ನೀರಾವರಿ ಕೆರೆಗಳ ಸಂಖ್ಯೆ ಎಷ್ಟು ಮತ್ತು ಯಾವುವು (ವಿವರ ನೀಡುವುದು);

ಆ) ಪ್ರಸ್ತುತ ಕೆರೆಗಳು ಯಾವ ಸ್ಥಿತಿಯಲ್ಲಿವೆ;

ಇ) ಈ ಕೆರೆಗಳಿಂದ ಎಷ್ಟು ರೈತರಿಗೆ ನೀರಾವರಿ ಸೌಲಭ್ಯವನ್ನು ಕಲ್ಪಿಸಲಾಗುತ್ತಿದೆ (ವಿವರಗಳನ್ನು ಒದಗಿಸುವುದು)

ಈ) ಬೀದರ್ ದಕ್ಷಿಣ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಹೊಸ ಕೆರೆಗಳನ್ನು

ನಿರ್ಮಿಸುವ ಪ್ರಸ್ತಾವನೆ ಸರ್ಕಾರದ ಮುಂದಿರುವುದೇ;

ಊ) ಮುಂದಿದ್ದಲ್ಲಿ, ಯಾವ ಯಾವ ಸ್ಥಳಗಳಲ್ಲಿ ಹೊಸ ಕೆರೆಗಳನ್ನು ನಿರ್ಮಿಸಲಾಗುವುದು;

ಋ) ಈ ಹೊಸ ಕೆರೆಗಳ ನಿರ್ಮಾಣಕ್ಕೆ ಸರ್ಕಾರ ಅನುದಾನವನ್ನೇನಾದರೂ ನಿಗದಿಪಡಿಸಿದೆಯೇ; ಹಾಗಿದ್ದಲ್ಲಿ, ಎಷ್ಟು ಪ್ರಮಾಣದ ಅನುದಾನವನ್ನು ನಿಗದಿಪಡಿಸಲಾಗಿದೆ?

ಶ್ರೀ ಗೋವಿಂದ ಎಂ. ಕಾರ್‌ಜೋಳ (ಸಣ್ಣ ನೀರಾವರಿ, ಯೋಜನೆ ಹಾಗೂ ಸಾಂಖ್ಯಿಕ ಸಚಿವರು):–

ಅ) ಬೀದರ ದಕ್ಷಿಣ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಸಣ್ಣ ನೀರಾವರಿ ಇಲಾಖೆಯ 22 ಕೆರೆಗಳಿವೆ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ

ಇ) ಈ ಕೆರೆಗಳಿಂದ 194 ರೈತರಿಗೆ ಪ್ರತ್ಯಕ್ಷವಾಗಿ ಹಾಗೂ 72 ರೈತರಿಗೆ ಪರೋಕ್ಷವಾಗಿ ನೀರಾವರಿ ಸೌಲಭ್ಯವನ್ನು ಕಲ್ಪಿಸಲಾಗುತ್ತಿದೆ. ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಈ) ಪ್ರಸ್ತಾವನೆ ಇರುವುದಿಲ್ಲ

ಉ) ಪ್ರಶ್ನೆ ಉದ್ಭವಿಸುವುದಿಲ್ಲ

ಊ) ನಿಗದಿಪಡಿಸಿಲ್ಲ

ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ಬಂಡೆಪ್ಪ ಕಾಶೆಂಪೂರ (ಬೀದರ ದಕ್ಷಿಣ) ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 427ಕ್ಕೆ ಅನುಬಂಧ ಬೀದರ ದಕ್ಷಿಣ ಮತ ಕ್ಷೇತ್ರದಲ್ಲಿ ಅಸ್ತಿತ್ವದಲ್ಲಿರುವ ಸಣ್ಣ ನೀರಾವರಿ ಕೆರೆಗಳ ವಿವರ

ಕ್ರ.ಸಂ	ಕೆರೆಯ ಹೆಸರು	ನಿರ್ಮಿಸಿದ ವರ್ಷ	ಅಚ್ಚುಕಟ್ಟು ಪ್ರದೇಶ (ಹೆಕ್ಟೇರ್‌ಗಳಲ್ಲಿ)	ವಾಸ್ತವಿಕ ನೀರಾವರಿ ಆಗುತ್ತಿರುವ ಭೂಮಿಯ ರೈತರ ಸಂಖ್ಯೆ	ಕೆರೆಯ ಪ್ರಸ್ತುತ ಸ್ಥಿತಿ
1	2	3	4	5	6
1	ಶಹಾಪೂರ ಕೆರೆ	1969	41	0	ಕೆಳಿರಣಿ ಆದ ಮೇಲೆ ಕೆರೆಯ ನೀರು ಸಂಗ್ರಹಣ ತಳಭಾಗದಲ್ಲಿ ಲ್ಯಾಟ್ ರೈಟ್ ಇರುವುದರಿಂದ ನೀರು ಇಂಗುತ್ತದೆ.
2	ಅಣದೂರ ಕೆರೆ	1966	46	0	ಕೆರೆಯು ಸುಸ್ಥಿತಿಯಲ್ಲಿದ್ದು.

1	2	3	4	5	6
					ಕಾಲುವೆಗಳ ದುರಸ್ತಿ ಮಾಡಬೇಕಾಗಿದೆ
3	ಮಲ್ಕಾಪೂರ ಕೆರೆ	1961	49	0	– ಸದರ –
4	ಸಿಂಧೋಲ ಕೆರೆ	1960	58	0	– ಸದರ –
5	ಮನ್ನಳ್ಳಿ ಕೆರೆ	1960	66	0	ಕಾಲುವೆಗಳ ಪುನರ್ ನಿರ್ಮಾಣ ಮಾಡಬೇಕಾಗಿದೆ
6	ನಿಜಾಂಪೂರ ಕೆರೆ	1977	67	0	ಕೆರೆಯು ಸುಸ್ಥಿತಿಯಲ್ಲಿದ್ದು, ಕಾಲುವೆಗಳ ಪುನರ್ ನಿರ್ಮಾಣ ಮಾಡಬೇಕಾಗಿದೆ
7	ಅಣದೂರ ವಾಡಿ ಕೆರೆ	1975	93	0	ಶೇಖರಣೆ ಆದ ಮೇಲೆ ಕೆರೆಯ ನೀರು ಸಂಗ್ರಹಣ ತಳಭಾಗದಲ್ಲಿ ಲ್ಯಾಟ್ ರೈಟ್ ಇರುವುದರಿಂದ ನೀರು ಸೋರುತ್ತದೆ
8	ಬೆಳ್ಳೂರಾ ಕೆರೆ	1966	96	0	ಕೆರೆಯು ಸುಸ್ಥಿತಿಯಲ್ಲಿದ್ದು, ಕಾಲುವೆಗಳ ದುರಸ್ತಿ ಮಾಡಬೇಕಾಗಿದೆ
9	ಸಿಕಂದ್ರಾಪೂರ ಕೆರೆ	1977	142	0	ಕೆರೆಯು ಸುಸ್ಥಿತಿಯಲ್ಲಿದ್ದು ಕಾಲುವೆಗಳ ಪುನರ್ ನಿರ್ಮಾಣ ಮಾಡಬೇಕಾಗಿದೆ
10	ಆಯಾಸಪೂರ ಕೆರೆ	1956ರ ಮುಂಚೆ	45	0	ಕೆರೆ ಒಡ್ಡು ಒಡೆದುಹೋದ ಸ್ಥಿತಿಯಲ್ಲಿದೆ
11	ಹೋಕರಾಣಾ (ಬಿ) ಕೆರೆ	1998	70	0	ಶೇಖರಣೆ ಆದ ಮೇಲೆ ಕೆರೆಯ ನೀರು ಸಂಗ್ರಹಣ ತಳಭಾಗದಲ್ಲಿ ಲ್ಯಾಟ್ ರೈಟ್ ಇರುವುದರಿಂದ ನೀರು ಇಂಗುತ್ತದೆ
12	ಜಮೀನ್ಸ್ತಾನಪೂರ ಕೆರೆ	1998	110	0	– ಸದರ –

1	2	3	4	5	6
13	ಕಂಗನಕೋಟ ಕೆರೆ	1998	112	0	– ಸದರ –
14	ಚಟನಳ್ಳಿ ಕೆರೆ	1983	343	0	– ಸದರ –
15	ಚಟನಳ್ಳಿ ವಾಡಿ ಕೆರೆ	1977	139	0	– ಸದರ –
16	ಬಾವಗಿ ಕೆರೆ	1960	132	194	ಸುಸ್ಥಿತಿಯಲ್ಲಿದೆ
17	ಖಾಸೆಂಪೂರ ಕೆರೆ	1960	47	0	ಕ್ಯಾಚ್‌ಮೆಂಟದಿಂದ ನೀರಿನ ಹರಿವು ಕಡಿಮೆ ಆಗಿ ನೀರು ಶೇಕರಣೆ ಕಡಿಮೆಯಾಗಿದೆ
18	ಔರಾದ (ಸಿರ್ಸಿ) ಕೆರೆ	1961	54	0	ಕೆರೆಯು ಸುಸ್ಥಿತಿಯಲ್ಲಿದ್ದು, ಕಾಲುವೆಗಳು ಪುನರ್ ನಿರ್ಮಾಣ ಮಾಡಬೇಕಾಗಿದೆ
19	ಮನ್ನಳ್ಳಿ ಇಂಗು ಕೆರೆ	2007	40	20 (ಪರೋಕ್ಷ)	ಸುಸ್ಥಿತಿಯಲ್ಲಿದೆ
20	ಆಯಾಸಪೂರ ಇಂಗು ಕೆರೆ	2009	40	15 (ಪರೋಕ್ಷ)	– ಸದರ –
21	ಯಾಕತಪೂರ ಇಂಗು ಕೆರೆ	2009	40	15 (ಪರೋಕ್ಷ)	– ಸದರ –
22	ರೇಕುಳಗಿ ಇಂಗು ಕೆರೆ	2010	40	22 (ಪರೋಕ್ಷ)	– ಸದರ –
	ಒಟ್ಟು	..	**1870**	**266**	

ಜಾಗತಿಕ ವಿಶ್ವ ಬಂಡವಾಳ ಹೂಡಿಕೆ ಸಂಗ್ರಹಿಸುವುದು